ಶ್ರೀ ಸಿ. ಬೈರೇಗೌಡ.—ದೊಡ್ಡರೋಗ ಸಾಂಕ್ರಾಮಿಕ ರೋಗ, ಆ ರೋಗಕ್ಕೆ ಕುರಿಗಳಿಗೆ ಲಸಿಕೆ ಹಾಕಬೇಕಾದರೆ ಒಂದು ಕುರಿಗೆ ೪ ರೂಪಾಯಿ ವಸೂಲಿ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಇಲ್ಲಿರುವುದು ಸತ್ತ ಕುರಿಗಳ ವಿಷಯ.

ಶ್ರೀ ಸಿ. ಬೈರೇಗೌಡ.—ನಮ್ಮ ಹತ್ತಿರ ಹಣ ವಸೂಲಿ ಮಾಡುತ್ತಿದ್ದಾರೆ. ಒಂದು ಕುರಿಗೆ ಲಸಿಕೆ ಹಾಕಬೇಕಾದರೆ ಕುರಿಕಾರರಿಂದ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದು ಸಾಂಕ್ರಾಮಿಕ ರೋಗವಾದುದರಿಂದ ಹಣ ಪಡೆಯದೆ ಸರ್ಕಾರದವರೆ ಲಸಿಕೆಯನ್ನು ಕೊಟ್ಟು ಈ ರೋಗವನ್ನು ತಡೆಗಟ್ಟುವುದಕ್ಕೆ ಸಾಧ್ಯತೆ ಇದೆಯೇ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಸದಸ್ಯರ ಅಭಿಪ್ರಾಯ ಸೂಕ್ತವಿದೆ. ಆದರ ಬಗ್ಗೆ ಮಾಹಿತಿ ಇಲ್ಲ, ಇದನ್ನು ಪರಿಶೀಲನೆ ಮಾಡುತ್ತೇನೆ:

## ಬಾದಾಮಿ ತಾಲೂಕಿಗೆ ಕುಡಿಯುವ ನೀರಿನ ಸರಬರಾಜು ಯೋಜನೆ

೨೯೪ (೧೪೧) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

(ಅ) ಬಾದಾಮಿ ತಾಲೂಕಿನಲ್ಲಿ ೧೯೮೦–೮೧ರಿಂದ ೧೯೮೩–೪೪ರವರೆಗೆ ಮಂಜೂರಾದ ನಳದ ಯೋಜನೆಗಳ ಸಂಖ್ಯೆ ಎಷ್ಟು? (ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಮತ್ತು ತ್ವರಿತಗತಿಯ ಗ್ರಾಮೀಣ ನೀರು ಸರಬರಾಜು ಯೋಜನೆ.)

(ಆ) ಈ ಪೈಕಿ ಪೂರ್ಣಗೊಳಿಸಿರುವ ಕೆಲಸಗಳ ಸಂಖ್ಯೆ ಎಷ್ಟು ಮತ್ತು ಉಳಿದವುಗಳು ಯಾವ ಹಂತದಲ್ಲಿವೆ (ಅಂದಾಜು ಖರ್ಚು ಸಮೇತ)

(ಇ) ಮಂಜೂರಾದ ಕೆಲಸಗಳನ್ನು ಈ ವರ್ಷದಲ್ಲಿಯೇ ಮುಗಿಸುವುದಕ್ಕೆ ಸರಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಅಬ್ದುಲ್ ನಜೀರ್ ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ಬಾದಾಮಿ ತಾಲ್ಲೂಕಿನಲ್ಲಿ ೧೯೮೦–೮೧ ರಿಂದ ೧೯೮೩–೮೪ರ ವರೆಗೆ ಮಂಜೂರಾದ ನಳದ ಯೋಜನೆಗಳ ಸಂಖ್ಯೆ ೯. ೧೯೮೩–೮೪ರ ಸಾಲಿನಲ್ಲಿ ಯಾವ ನಳದ ಯೋಜನೆಗಳು ಇದುವರೆಗೆ ಮಂಜೂರು ಆಗಿರುವುದಿಲ್ಲ.

(ಆ) ಮಂಜೂರಾದ ೯ ಯೋಜನೆಗಳ ಪೈಕಿ, ೩ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ ಹಾಗೂ ಉಳಿದ ೬ ಯೋಜನೆಗಳ ಕಾರ್ಯವು ವಿವಿಧ ಹಂತದಲ್ಲಿವೆ. ಈ ೯ ಯೋಜನೆಗಳ ವಿವರಗಳು ಕೆಳಕಂಡಂತಿವೆ.

೧. ಲಕ್ಕಮ್ಮಪುರ : ಈ ಯೋಜನೆಯನ್ನು ದಿನಾಂಕ ೨೯ನೇ ನವೆಂಬರ್ ೧೯೮೨ರಂದು ಕಾರ್ಯಗತಗೊಳಿಸಲಾಗಿದೆ. ಕೆಲವು ಸಣ್ಣ ಪುಟ್ಟ ಕೆಲಸಗಳು ನಡೆಯುತ್ತಿವೆ. ಇದುವರೆಗೆ ರೂ. ೧,೦೦,೧೦೯–೭೦ ಖರ್ಚಾಗಿದೆ. ಅಂದಾಜು ವೆಚ್ಚ ರೂ. ೧,೧೧,೦೦೦.

೨. ಧನಾಷಿನೂರು ಮತ್ತು ಮನ್ನೇರಿ : ಪಂಪ್ ಹೌಸಿನ ಮತ್ತು ರೈಸಿಂಗ್ ಮೈನ್ ಹಾಕುವ ಕೆಲಸ ಮುಗಿದಿದೆ. ಡಿಸ್ಟ್ರಿಬ್ಯೂಷನ್ ಲೈನ್ ಹಾಕುವ ಕೆಲಸವನ್ನು ಕೈಗೊಳ್ಳಲಾಗಿದೆ. ಇದುವರೆಗೆ ರೂ. ೧,೦೫,೧೪೫–೭೫ ಖರ್ಚಾಗಿದೆ. ಇದರ ಅಂದಾಜು ವೆಚ್ಚ ರೂ. ೪,೧೫,೦೦೦.

೩. ಕನಕನ ಕೊಪ್ಪ : ಫೆಬ್ರುವರಿ ೮೩ರಂದು ನೇರವಾಗಿ ನೀರನ್ನು ಪಂಪು ಮಾಡುವ ಮೂಲಕ ಗ್ರಾಮಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ಇಎಲ್‌ಎಸ್‌ಆರ್ ಕೆಲಸವನ್ನು ಕೈಗೊಳ್ಳಲಾಗಿದೆ. ಇದುವರೆವಿಗೂ ರೂ. ೫೯,೩೦೦ ಖರ್ಚಾಗಿದೆ.

೪. ಆಡಗಲ್ : ಈ ಯೋಜನೆಯ ಅಂದಾಜು ಪಟ್ಟಿಯನ್ನು ದಿನಾಂಕ ೧೬ನೇ ಮೇ ೧೯೮೩ ರಂದು ಮಂಜೂರು ಮಾಡಲಾಗಿದೆ. ಇದರ ಕೆಲಸವನ್ನು ಗುತ್ತಿಗೆದಾರರಿಗೆ ಒಪ್ಪಿಸುವ ಹಂತದಲ್ಲಿದೆ.

೫. ಚಿಕ್ಕಮಜಲಗುಡ್ಡ : ಈ ಯೋಜನೆಯ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಮತ್ತು ಅದು ಮಂಜೂರಾತಿಯ ಹಂತದಲ್ಲಿದೆ.

೬. ಚಿಮ್ಮನಕಟ್ಟಿ : ಈ ಯೋಜನೆಯ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಮತ್ತು ಅದು ಮಂಜೂರಾತಿಯ ಅಂತಿಮ ಹಂತದಲ್ಲಿದೆ.

೭. ಕುಟಕನ ಕೆರೆ : ರೈಸಿಂಗ್ ಮೈನ್ ಮತ್ತು ಡಿಸ್ಟ್ರಿಬ್ಯೂಷನ್ ಲೈನ್‌ಗಳನ್ನು ಹಾಕುವ ಕೆಲಸ ಮುಗಿದಿದೆ. ಪಂಪ್ ಹೌಸಿನ ಕೆಲಸವನ್ನು ಪ್ರಾರಂಭಿಸಲಾಗಿದೆ. ಇದುವರೆಗೆ ರೂ. ೧,೧೩,೬೫೯ ಖರ್ಚಾಗಿದೆ. ಅಂದಾಜು ವೆಚ್ಚ ರೂ. ೨,೧೬,೦೦೦.

೮. ಗೋವಿನಕೊಪ್ಪ : ಜನವರಿ ೮೫ರಿಂದ ನೀರವಾಗಿ ಪಂಪು ಮಾಡುವ ಮೂಲಕ ಗ್ರಾಮಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ಇಎಲ್‌ಎನ್‌ಆರ್ ಕೆಲಸವನ್ನು ಪ್ರಾರಂಭಿಸಲಾಗಿದೆ. ಇದುವರೆಗೆ ರೂ. ೬೫,೬೩೪–೫೦ ಖರ್ಚಾಗಿದೆ. ಅಂದಾಜು ವೆಚ್ಚ ರೂ. ೧,೫೬,೭೦೦.

೯. ಹೆಬ್ಬಳ್ಳಿ : ರೈಸಿಂಗ್ ಮೈನ್ ಮತ್ತು ಡಿಸ್ಟ್ರಿಬ್ಯೂಷನ್ ಲೈನ್ ಹಾಕುವ ಕೆಲಸ ಪ್ರಾರಂಭಿಸಲಾಗಿದೆ. ಪಂಪ್‌ಹೌಸ್ ಕೆಲಸವೂ ಕೂಡ ಆರಂಭವಾಗಿದೆ. ಇದುವರೆಗೆ ರೂ. ೧,೧೮,೯೫೩ ಖರ್ಚಾಗಿದೆ. ಅಂದಾಜು ವೆಚ್ಚ ರೂ. ೨,೮೮,೦೦೦.

(೧೪) ಲಕ್ಷ್ಮೇಶ್ವರ : ಧನಾಷನೂರು ಮತ್ತು ಮುನ್ನೇರಿ ಕುಟಕನ ಕೆರೆ, ಗೋವಿನ ಕೊಪ್ಪ ಮತ್ತು ಹೆಬ್ಬಳ್ಳಿ ಯೋಜನೆಗಳನ್ನು ೧೯೮೩–೮೪ನೇ ಸಾಲಿನಲ್ಲಿಯೇ ಪೂರ್ಣಗೊಳಿಸಲು ಸರಕಾರವು ಗುರಿಇಟ್ಟುಕೊಂಡಿದೆ. ಇನ್ನುಳಿದ ಯೋಜನೆಗಳನ್ನು ಅಂದರೆ ಕನಕನಕೊಪ್ಪ, ಅಡಗಲ್, ಚಿಕ್ಕ ಮಜಲಗುಡ್ಡ ಮತ್ತು ಚಿಮ್ಮನಕಟ್ಟಿ ಇವುಗಳನ್ನು ಈ ವರ್ಷದಲ್ಲಿ ಮುಗಿಸುವ ಗುರಿ ಇಟ್ಟುಕೊಳ್ಳಲಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—೧೯೮೦–೮೧ರಿಂದ ೧೯೮೨–೮೩ರವರೆಗೆ ಮಂಜೂರಾದ ನಳದ ಯೋಜನೆಗಳು ೯. ಪ್ರಾರಂಭವಾಗಿರತಕ್ಕ ೫ ಯೋಜನೆಗಳನ್ನು ಈ ವರ್ಷ ಮುಗಿಸಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ೫ ಯೋಜನೆಗಳಿಗೆ ಆಗಬೇಕಾಗಿರತಕ್ಕ ಹಣವನ್ನು ಇಟ್ಟಿದ್ದೀರಾ? ಈ ವರ್ಷದಲ್ಲಿ ಎಷ್ಟು ಹಣವನ್ನು ಕೊಡುತ್ತೀರಿ? ಉಳಿದ ನಾಲ್ಕು ಯೋಜನೆಗಳನ್ನು ಯಾವ ವರ್ಷದಲ್ಲಿ ಪ್ರಾರಂಭ ಮಾಡುತ್ತೀರಿ? ಪ್ರಾರಂಭ ಮಾಡಿದ ಮೇಲೆ ಎಷ್ಟು ಹಣವನ್ನು ತಾವು ಕೊಡುತ್ತೀರಿ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಈ ಯೋಜನೆಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎನ್ನುವುದಕ್ಕೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಈಗ ಹಾಲಿ ಆಲ್ಲಿ ೩ ಯೋಜನೆಗಳ ಕೆಲಸವನ್ನು ಮಾಡಬೇಕಾಗಿದೆ. ಇನ್ನು ಉಳಿದ ೬ ಕೆಲಸಗಳನ್ನು ನಿಧಾನವಾಗಿ ಮಾಡಬೇಕಾಗುತ್ತದೆ. ಕಾರಣವೇನೆಂದರೆ ಒಂದೇ ಸಾರಿ ಎಲ್ಲಾ ೯ ಯೋಜನೆಗಳನ್ನು ಮಾಡಿ ಮುಗಿಸುವುದಕ್ಕೆ ಆಗುವುದಿಲ್ಲ. ಮತ್ತು ೫ನೇ ಯೋಜನೆಯಲ್ಲಿ ಚಿಮ್ಮನಕಟ್ಟಿಯನ್ನು ಸಹ ಸೇರಿಸಿದ್ದೇವೆ. ಈಗ ನಮ್ಮಲ್ಲಿರತಕ್ಕಂಥ ಹಣದ ಕೊರತೆಯನ್ನು ನೋಡಿಕೊಂಡು ನಾವು ಕೆಲಸಗಳನ್ನು ಪ್ರಾರಂಭ ಮಾಡಬೇಕಾಗುತ್ತದೆ. ಈಗ ಮಂಜೂರಾತಿ ದೊರೆತಿರುವುದು ಸುಮಾರು ೨.೧೫ ಲಕ್ಷ ರೂಪಾಯಿಗಳ ಯೋಜನೆಗೆ. ಆದರೆ ಈಗ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಯಾವ ಯಾವ ಗ್ರಾಮಗಳು ಹಿಂದುಳಿದಿದೆ ಅಂಥ ಗ್ರಾಮಗಳನ್ನು ಗುರುತಿಸಿ ಆದ್ಯತೆಯ ಮೇರೆಗೆ ಕೆಲಸ ಮಾಡಬೇಕಾಗುತ್ತದೆ. ಮತ್ತು ಅವರಲ್ಲಿ ಮಾನ್ಯ ಸದಸ್ಯರ ಕ್ಷೇತ್ರದ ಗ್ರಾಮವಾದ ಚಿಮ್ಮನಕಟ್ಟಿಯನ್ನು ಸಹ ಸೇರಿಸಿದ್ದೇವೆ. ಆದ್ದರಿಂದ ಆ ಯೋಜನೆಯನ್ನು ಈ ವರ್ಷ ಪ್ರಾರಂಭ ಮಾಡಿ ಮುಗಿಸಿ ಕೊಡುತ್ತೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ ಈ ವರ್ಷವೇ ಮುಗಿಸಿಕೊಡುವಂಥ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಆದರೆ ಆ ಯೋಜನೆಗೆ ತಮ್ಮ ಒಂದು ಅಂದಾಜಿನ ಪ್ರಕಾರ ೧೦ ಲಕ್ಷ ರೂಪಾಯಿಗಳಾಗುತ್ತದೆ. ಆದರೆ ಈಗ ೭ ಲಕ್ಷ ರೂಪಾಯಿಗಳು ಮಂಜೂರಾಗಿದೆಯೆಂದು ತಿಳಿಸಿದ್ದೀರಿ. ಆದ್ದರಿಂದ ತಾವು ಈ ಯೋಜನೆಗೆ ಹೆಚ್ಚು ಆದ್ಯತೆಯನ್ನು ಕೊಟ್ಟು ಮಂಜೂರು ಮಾಡಿಸಿ ಕೆಲಸ ಪ್ರಾರಂಭ ಮಾಡಿ ಈ ವರ್ಷವೇ ಮುಗಿಸಿಕೊಡುತ್ತೀರಿ? ತಮಗೆ

ಹಣದ ಕೊರತೆ ಇದೆಯೆಂಬುದು ನನಗೂ ಗೊತ್ತಿದೆ. ೫ ಯೋಜನೆಗಳಿಗೂ ಕೂಡ ಕಾರ್ಯಕ್ರಮ ವನ್ನು ಹಾಕಿಕೊಳ್ಳಬೇಕು. ಚಿಕ್ಕಮಗಳೂರಿನಂತಹ ಜಿಲ್ಲೆಯಲ್ಲಿ ಕೂಡ ಒಂದು ಯೋಜನೆಯನ್ನು ಹಾಕಿಕೊಂಡು ಮುಂದುವರಿಸಿಕೊಂಡು ಹೋಗಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ ಚಿಕ್ಕಮಗಳೂರಿನ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ೯ ಯೋಜನೆಗಳನ್ನು ಹಾಕಿಕೊಂಡಿದ್ದೀವೆಂದು ನಾನು ಹೇಳಿದ್ದೇನೆ. ಈಗ ಎಲ್ಲಾ ಕಡೆ ನಾವು ಆದ್ಯತೆ ಕೊಟ್ಟು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಕಾರಣವೇನೆಂದರೆ ನಮ್ಮಲ್ಲಿ ಸಾಕಷ್ಟು ಹಣದ ಕೊರತೆ ಇದೆ. ಎಲ್ಲೆಲ್ಲಿ ನೀರು ಇಲ್ಲವೋ ಅಂಥ ಕಡೆಗಳಲ್ಲಿ ಈ ಕೆಲಸಕ್ಕೆ ಆದ್ಯತೆ ಕೊಟ್ಟು ಮಾಡಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯರ ಸ್ವಕ್ಷೇತ್ರದಲ್ಲಿ ಅಂದರೆ ಚಿಮ್ಮನಕಟ್ಟೆ ಯನ್ನು ಈ ಯೋಜನೆಯಲ್ಲಿ ಸೇರಿಸಿದ್ದೇವೆ.

## ಕನಕಪುರದ ಗ್ರಾಮಾಂತರ ಕಾಲೇಜಿಗೆ ಯು.ಜಿ.ಸಿ. ಅಭಿವೃದ್ಧಿ ಯೋಜನೆಯ ಮಂಜೂರಾತಿ

೨೯೫ (೧೫೩) ಶ್ರೀ ಹೆಚ್.ಜಿ. ಚಿನ್ನಪ್ಪ (ಮಾಗಡಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಐದನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕನಕಪುರದ ರೂರಲ್ ಕಾಲೇಜಿನ ಅಭಿವೃದ್ಧಿಗಾಗಿ ಯು.ಜಿ.ಸಿಯವರು ಕೊಟ್ಟ ಒಟ್ಟು ಅನುದಾನವೆಷ್ಟು ? (ವಿವರಣೆಯನ್ನು ಕೊಡಬೇಕು)

ಆ) ಈ ಅನುದಾನವನ್ನು ಯಾವ ಯೋಜನೆಗಾಗಿ ಮಂಜೂರು ಮಾಡಲಾಯಿತು ? (ವಿವರಗಳನ್ನು ಕೊಡಬೇಕು)

ಇ) ಈ ಅನುದಾನದಲ್ಲಿ ಯು.ಜಿ.ಸಿ ಯವರು ನೀಡಿರುವ ಹಾಗೂ ರಾಜ್ಯ ಸರ್ಕಾರವು ನೀಡಿರುವ ಮಂಜೂರಾತಿಯ ವಿವರಗಳೇನು ?

ಈ) ಮಂಜೂರಾದ ಉದ್ದೇಶಕ್ಕೆ ಈ ಅನುದಾನವನ್ನು ವಿನಿಯೋಗಿಸಿಕೊಂಡಿದ್ದಾರೆಯೆ ?

ಉ) ಈ ಕಾಲೇಜಿನಿಂದ ಅನುದಾನವನ್ನು ವೆಚ್ಚ ಮಾಡಿದ್ದಕ್ಕೆ ಸಂಬಂಧಪಟ್ಟಂತೆ ಯುಟಿಲೈಸೇಶನ್ ಸರ್ಟಿಫಿಕೇಟ್ ಬಂದಿದೆಯೇ; ಬಂದಿದ್ದರೆ ಯಾವಾಗ ಬಂದಿತು;

ಊ) ಯಾವುದಾದರೂ ಫರ್ನಿಚರ್‌ಗೆ ಉಪಕರಣಗಳು ಬರದೆ ಇದ್ದರೂ ಹೆಚ್ಚು ಹಣವನ್ನು ಕೊಟ್ಟಿದ್ದಾರೆಯೇ ? ಕೊಟ್ಟಿರುವುದಾದರೆ ಸಂಬಂಧಿಸಿದವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

ಅ) ರೂರಲ್ ಕಾಲೇಜಿನ ಅಭಿವೃದ್ಧಿಗಾಗಿ ಯು.ಜಿ.ಸಿ. ಯವರು ಐದನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕೊಟ್ಟಿರುವ ಅನುದಾನದ ವಿವರ :-

| | | | |
|---|---|---|---|
| ೧) | ಪ್ರಯೋಗ ಶಾಲೆಯ ಉಪಕರಣಗಳಿಗಾಗಿ | — | ೨,೬೧,೨೫೫-೦೦ |
| ೨) | ಗ್ರಂಥ ಬಂಡಾರದ ಅಭಿವೃದ್ಧಿಗಾಗಿ | — | ೩೫,೦೦೦-೦೦ |
| ೩) | ಗ್ರಂಥ ಬಂಡಾರದ ಅಭಿವೃದ್ಧಿಗಾಗಿ | — | ೫೦,೦೦೦-೦೦ |